# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **855**
ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : **19.08.2025**
ಉತ್ತರಿಸುವ ಸಚಿವರು : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು; ಈ ಯೋಜನೆಗಳಡಿ ಕಳೆದ 03 ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ಸ್ಥಾಪನೆಯಾಗಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು; (ಆದೇಶದ ಪ್ರತಿಯೊಂದಿಗೆ ಸಂಪೂರ್ಣ ವಿವರವನ್ನು ನೀಡುವುದು) | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಕೈಗಾರಿಕೆಗಳನ್ನು ಸ್ಥಾಪಿಸಲು ರೂಪಿಸಿರುವ ಯೋಜನೆಗಳ ವಿವರಗಳನ್ನು **ಅನುಬಂಧ-1 ರಲ್ಲಿ** ಲಗತ್ತಿಸಿದೆ.<br><br>ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿದ್ದಂತೆ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಕಳೆದ 03 ವರ್ಷಗಳಲ್ಲಿ ನೋಂದಣಿಯಾಗಿರುವ ಎಂ.ಎಸ್.ಎಂ.ಇ ಉದ್ಯಮಗಳ ವಿವರಗಳು ಈ ಕೆಳಕಂಡಂತಿವೆ. |

**ರಾಮನಗರ ಜಿಲ್ಲೆಯಲ್ಲಿ ಉದ್ಯಮ್ ತಂತ್ರಾಂಶದಲ್ಲಿ ನೋಂದಣಿಯಾಗಿರುವಂತೆ**

| ವರ್ಷ | ಸೂಕ್ಷ್ಮ | ಸಣ್ಣ | ಮಧ್ಯಮ | ಒಟ್ಟು |
|---|---|---|---|---|
| 2022-23 | 20406 | 259 | 14 | 20679 |
| 2023-24 | 23157 | 127 | 9 | 23293 |
| 2024-25 | 26151 | 67 | 6 | 26224 |
| 2025-26(Upto Aug 10, 2025) | 4199 | 1 | 3 | 4203 |

**ಬೆಂಗಳೂರು ಗ್ರಾಮಾಂತರ ಜಿಲ್ಲೆ ಉದ್ಯಮ್ ತಂತ್ರಾಂಶದಲ್ಲಿ ನೋಂದಣಿಯಾಗಿರುವಂತೆ**

| ವರ್ಷ | ಸೂಕ್ಷ್ಮ | ಸಣ್ಣ | ಮಧ್ಯಮ | ಒಟ್ಟು |
|---|---|---|---|---|
| 2022-23 | 6257 | 71 | - | 6328 |
| 2023-24 | 10575 | 39 | 2 | 10616 |
| 2024-25 | 12584 | 21 | 2 | 12607 |
| 2025-26(upto Aug 10, 2025) | 8868 | 25 | 4 | 8897 |

| | | |
|---|---|---|
| ಆ) | ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಯಾವ ಯಾವ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶಗಳಿವೆ ಮತ್ತು ಸಣ್ಣ ಕೈಗಾರಿಕೆಗಳ ಒಂದು ಕೈಗಾರಿಕೆ ಪ್ರದೇಶ ಸ್ಥಾಪಿಸಲು ಇರುವಂತಹ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ, ಎರೋಸ್ಪೇಸ್, ಮೆಷೀನ್, ಟೂಲ್ಸ್, ಜವಳಿ, ಆಹಾರ ಸಂಸ್ಕರಣೆ, ಪ್ಯಾಕೇಜಿಂಗ್, ಕೃಷಿ ಉತ್ಪನ್ನಗಳ ಸಂಸ್ಕರಣೆ, ಇತ್ಯಾದಿ ಸಣ್ಣ ಕೈಗಾರಿಕೆ ಸ್ಥಾಪಿಸಲು ಅವಕಾಶಗಳಿವೆ.<br><br>ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕೈಗಾರಿಕಾ ನೀತಿ 2025-30 ರನ್ವಯ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ರಿಯಾಯಿತಿ ಮತ್ತು ಉತ್ತೇಜನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.<br><br>ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ನಿಯಮಗಳ ಅನ್ವಯ ಕೈಗಾರಿಕಾ ವಸಾಹತು ಸ್ಥಾಪಿಸಲು ಇರುವಂತಹ ಮಾನದಂಡಗಳ ವಿವರಗಳು ಈ ಕೆಳಕಂಡಂತಿವೆ:<br>1) ಕೈಗಾರಿಕಾ ವಸಾಹತು ಸ್ಥಾಪಿಸಲು ಅಲ್ಲಿನ ನಿವೇಶನಗಳಿಗೆ ಬೇಡಿಕೆ ಇರುವ ಬಗ್ಗೆ ಬೇಡಿಕೆ ಸಮೀಕ್ಷೆ ನಡೆಸಿ ಖಾತ್ರಿಪಡಿಸಿಕೊಳ್ಳಬೇಕು.<br>2) ಪ್ರಸ್ತಾಪಿಸಿದ ಜಮೀನಿಗೆ ಸಂಪರ್ಕ ವ್ಯವಸ್ಥೆ ಮತ್ತು ಮೂಲಸೌಲಭ್ಯದ ಬಗ್ಗೆ ಖಾತ್ರಿಪಡಿಸಿಕೊಳ್ಳಲಾಗುವುದು.<br>3) ಪ್ರಸ್ತಾಪಿಸಿದ ಜಮೀನಿಗೆ ಅರಣ್ಯ/ಮಾಲಿನ್ಯ ನಿಯಂತ್ರಣ ಮಂಡಳಿಗಳ ನಿರಾಪೇಕ್ಷಣಾ ಪತ್ರ ಪಡೆಯಬೇಕು.<br>4) ನೀರಿನ ಲಭ್ಯತೆ ವಿವರ.<br>5) ವಿದ್ಯುಚ್ಚಕ್ತಿ ಲಭ್ಯತೆ ವಿವರ.<br>6) ಜಮೀನು ಹಸಿರುಪಟ್ಟಿಗೆ ಒಳಪಡದ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.<br>7) ಪರಿಷ್ಕೃತ ಮಾಸ್ಟರ್ ಪ್ಲಾನ್ ಪ್ರಕಾರ ಯಾವ ವಲಯದಲ್ಲಿ ಜಮೀನು ಬರುತ್ತದೆ ಎಂಬ ಮಾಹಿತಿ. |
| (ಇ) | ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರದ ವತಿಯಿಂದ ಯಾವ ಯಾವ ಯೋಜನೆಗಳನ್ನು ರೂಪಿಸಿ ಸಾಲ ಸೌಲಭ್ಯ ಸಹಾಯಧನ ನೀಡಲಾಗುತ್ತಿದೆ? (ಸಂಪೂರ್ಣ ವಿವರ ನೀಡುವುದು) | ರಾಜ್ಯ ಸರ್ಕಾರವು K.S.F.C. ಸಂಸ್ಥೆ ಮೂಲಕ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ಒದಗಿಸುತ್ತಿರುವ ಸಾಲ ಸೌಲಭ್ಯಗಳ ವಿವರ ಕೆಳಕಂಡಂತಿದೆ:<br><br>**01.ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:**<br><br>ಈ ಯೋಜನೆಯಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಉದ್ದಿಮೆದಾರರಿಗೆ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಘಟಕಗಳಿಗೆ ಮತ್ತು ಸೇವಾಕ್ಷೇತ್ರದ ಉದ್ದಿಮೆಗಳ ಸ್ಥಾಪನೆಗೆ ಹಾಗೂ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಅವಧಿ ಸಾಲವನ್ನು ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಫಲಾನುಭವಿಗಳು ಪಾವತಿಸಬೇಕಾದ ವಾರ್ಷಿಕ ನಿವ್ವಳ ಬಡ್ಡಿ ದರ ಶೇ.4 ರಷ್ಟು. ಸಂಸ್ಥೆಯು ವಿಧಿಸುವ ಸಾಮಾನ್ಯ ಬಡ್ಡಿ ಹಾಗೂ ನಿವ್ವಳ ಬಡ್ಡಿದರದ ನಡುವಿನ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯಧನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ |

ಮರುಪಾವತಿಸಲಾಗುತ್ತದೆ. ಈ ಯೋಜನೆಯಡಿಯಲ್ಲಿ ಕನಿಷ್ಟ 10.00 ಲಕ್ಷ ರೂ.ಗಳಿಂದ ಗರಿಷ್ಟ 1000.00 ಲಕ್ಷ ರೂ.ಗಳವರೆಗೆ ಸಾಲದ ನೆರವು ದೊರೆಯುತ್ತದೆ. (ಅವಧಿ ಸಾಲ ಮತ್ತು ಗರಿಷ್ಟ 50.00 ಲಕ್ಷ ರೂ.ಗಳ ಒಂದೇ ಬಾರಿಯ ದುಡಿಮೆ ಬಂಡವಾಳ ಸೇರಿ). ಈ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಫಲಾನುಭವಿಗಳು ಸಾಲದ ಮರುಪಾವತಿಯಲ್ಲಿ ಸುಸ್ತಿದಾರರಾಗಿರಬಾರದು. ಈ ಯೋಜನೆಯಡಿ 500.00 ಲಕ್ಷ ರೂ.ಗಳವರೆಗೆ 8 ವರ್ಷ ಹಾಗೂ 500.00 ಲಕ್ಷ ರೂ.ಗಳಿಂದ 1000.00 ಲಕ್ಷ ರೂ.ಗಳವರೆಗೆ 10 ವರ್ಷಗಳ ಅವಧಿಗೆ ಮಾತ್ರ ಬಡ್ಡಿ ಸಹಾಯಧನ ಪಡೆಯಲು ಫಲಾನುಭವಿಗಳು ಅರ್ಹರಾಗಿರುತ್ತಾರೆ.

**02.ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:**

ಈ ಯೋಜನೆಯು ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉದ್ಯಮಗಳ ವಿಸ್ತರಣೆ, ವೈವಿಧ್ಯೀಕರಣ, ಆಧುನೀಕರಣಕ್ಕೆ ಅನ್ವಯವಾಗುತ್ತದೆ. ಘಟಕವು ಸಂಪೂರ್ಣವಾಗಿ ಹಿಂದುಳಿದ ವರ್ಗದ ವರ್ಗ-1 ಮತ್ತು ಹಿಂದುಳಿದ ವರ್ಗದ 2(ಎ) ಉದ್ಯಮಿಗಳ ಮಾಲೀಕತ್ವದಲ್ಲಿರಬೇಕು. ಈ ಯೋಜನೆಯಡಿ ವಾರ್ಷಿಕ ಶೇ.6 ರಷ್ಟು ಬಡ್ಡಿ ಸಹಾಯಧನ ಲಭ್ಯವಿರುತ್ತದೆ. ಸಂಸ್ಥೆಯ ಸಾಮಾನ್ಯ ಬಡ್ಡಿದರದ ಹಾಗೂ ಶೇ.6ರ ಬಡ್ಡಿ ಸಹಾಯಧನದ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ. ಈ ಬಡ್ಡಿ ಸಹಾಯಧನವನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ನಿಗಮದಿಂದ ಮರುಪಾವತಿಸಲಾಗುತ್ತದೆ. ಈ ಯೋಜನೆಯಡಿ ಕನಿಷ್ಟ 5.00 ಲಕ್ಷ ರೂ.ಗಳಿಂದ ಗರಿಷ್ಠ 1000.00 ಲಕ್ಷ ರೂ.ಗಳವರೆಗೆ ಸಾಲದ ನೆರವು ದೊರೆಯುತ್ತದೆ. (ಅವಧಿಸಾಲ ಮತ್ತು ಗರಿಷ್ಠ 50.00 ಲಕ್ಷ ರೂ.ಗಳ ಒಂದೇ ಬಾರಿಯ ದುಡಿಮೆ ಬಂಡವಾಳ ಸೇರಿ). ಈ ಯೋಜನೆಯಡಿ 500.00 ಲಕ್ಷ ರೂ.ಗಳವರೆಗೆ 8 ವರ್ಷ ಹಾಗೂ 500.00 ಲಕ್ಷ ರೂ.ಗಳಿಂದ 1000.00 ಲಕ್ಷ ರೂ.ಗಳವರೆಗೆ 10 ವರ್ಷಗಳ ಅವಧಿಗೆ ಮಾತ್ರ ಬಡ್ಡಿ ಸಹಾಯಧನ ಪಡೆಯಲು ಫಲಾನುಭವಿಗಳು ಅರ್ಹರಾಗಿರುತ್ತಾರೆ. ಈ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಫಲಾನುಭವಿಗಳು ಸಾಲದ ಮರುಪಾವತಿಯಲ್ಲಿ ಸುಸ್ತಿದಾರರಾಗಿರಬಾರದು. ಸಂಸ್ಥೆಯಲ್ಲಿ ಈ ಯೋಜನೆಯು ಡಿಸೆಂಬರ್ 2023ರಲ್ಲಿ ಅನುಷ್ಠಾನಗೊಳಿಸಲಾಯಿತು.

**03.ಎಲ್ಲಾ ವರ್ಗದ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:**

ಈ ಯೋಜನೆಯು ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಹೊಸ ಉತ್ಪಾದನಾ ಘಟಕಗಳಿಗೆ ಹಾಗೂ ಆಸ್ತಿತ್ವದಲ್ಲಿರುವ ಸೂಕ್ಷ್ಮ

| | | |
|---|---|---|
| | | ಹಾಗೂ ಸಣ್ಣ ಪ್ರಮಾಣದ ಘಟಕಗಳ ವಿಸ್ತರಣೆ / ಆಧುನೀಕರಣ / ವೈವಿಧ್ಯೀಕರಣ / ತಾಂತ್ರಿಕ ಉನ್ನತೀಕರಣಕ್ಕೆ ನೇರವಾಗಿ ಉತ್ಪಾದನೆಗೆ ತೊಡಗಿಸುವ ಕಟ್ಟಡ ಹಾಗೂ ಯಂತ್ರೋಪಕರಣಗಳ ಹೊಸ ಹೂಡಿಕೆಗೆ ಅನ್ವಯಿಸುತ್ತದೆ. ಈ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಶೇ.6ರಷ್ಟು ಬಡ್ಡಿ ಸಹಾಯಧನ ಲಭ್ಯವಿರುತ್ತದೆ. ಸಂಸ್ಥೆಯ ಸಾಮಾನ್ಯ ಬಡ್ಡಿದರದ ಹಾಗೂ ಶೇ.6ರ ಬಡ್ಡಿ ಸಹಾಯಧನದ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ. ಈ ಬಡ್ಡಿ ಸಹಾಯಧನವನ್ನು ಕರ್ನಾಟಕ ಸರ್ಕಾರದ ಎಂ.ಎಸ್.ಎಂ.ಇ. ಇಲಾಖೆಯು ಭರಿಸುತ್ತದೆ. ಈ ಯೋಜನೆಯಡಿ ಕನಿಷ್ಟ ಸಾಲದ ಮೊತ್ತ ರೂ.5.00 ಲಕ್ಷ ರೂ.ಗಳು ಮತ್ತು ಗರಿಷ್ಠ ಸಾಲದ ಮೊತ್ತ ರೂ.500.00 ಲಕ್ಷ ರೂ.ಗಳು. ಈ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಫಲಾನುಭವಿಗಳು ಸಾಲದ ಮರುಪಾವತಿಯಲ್ಲಿ ಸುಸ್ತಿದಾರರಾಗಿರಬಾರದು ಹಾಗೂ ಸಾಲ ವಿತರಣೆಯಾದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾತ್ರ ಬಡ್ಡಿ ಸಹಾಯಧನ ಪಡೆಯಲು ಫಲಾನುಭವಿಗಳು ಅರ್ಹರಾಗಿರುತ್ತಾರೆ.<br><br>**(ಅನುಬಂಧ-1 ಮತ್ತು 2)** ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಯೋಜನೆಗಳ ವಿವರ ಮತ್ತು ಕೈಗಾರಿಕಾ ನೀತಿಯ ಸಂಕ್ಷಿಪ್ತ ವಿವರಗಳನ್ನು ಲಗತ್ತಿಸಿದೆ. |

**ಸಿಐ 111 ಎಸ್ಎಸ್ಐ 2025**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು.

# ಅನುಬಂಧ - 1

ಸಣ್ಣ ಕೈಗಾರಿಕೆ ಪ್ರಾರಂಭಿಸಲು ಉದ್ದಿಮೆದಾರರಿಗೆ ಸರ್ಕಾರದ ಪ್ರೋತ್ಸಾಹಕ ಯೋಜನೆಗಳು ಈ ಕೆಳಗಿನಂತಿರುತ್ತವೆ.

1. **ಕೈಗಾರಿಕಾ ನೀತಿ 2025-30**

ಕನಾಟಕ ರಾಜ್ಯ ಕೈಗಾರಿಕಾ ನೀತಿ 2025-30 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ.

1 .ಬಂಡವಾಳ ಹೂಡಿಕೆ ಸಹಾಯಧನ/ ವಹಿವಾಟು ಆಧಾರಿತ ಹೂಡಿಕೆ ಸಹಾಯಧನ.
2. ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ವಿನಾಯಿತಿ.
3. ಭೂ ಪರಿವರ್ತನಾ ಶುಲ್ಕ ಮರುಪಾವತಿ.
4. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ.
5. ವಿದ್ಯುತ್ ಚ್ಚಕ್ತಿ ಸಹಾಯಧನ.
6. ಕೈಗಾರಿಕಾ ವಸತಿ ನಿಲಯ ಸಹಾಯಧನ
7. ತಂತ್ರಜ್ಞಾನ ಅಳವಡಿಕೆ & ನವೋನ್ವೇಶಣೆ ಉತ್ತೇಜನ
8. ರಫ್ತು ಘಟಕಗಳಿಗೆ ಪ್ರೋತ್ಸಾಹ.
9. ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀಕರಣ ಉತ್ತೇಜನ
10. ಲಾಜಿಸ್ಟಿಕ್ಸ್ ಮತ್ತು ಉಗ್ರಾಣ ಸಹಾಯಧನ

2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ್ಗದವರಿಗೆ ಯೋಜನೆಗಳು

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಯೋಜನೆಯ ವಿವಿಧ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ನೀಡುತ್ತಿರುವ ಸಾಲ ಸೌಲಭ್ಯದ ವಿವರ ಕೆಳಕಂಡಂತಿದೆ.

ಅ. ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ:

ಈ ಯೋಜನೆಯಡಿ ಪ.ಜಾ/ಪ.ಪಂ. ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಹೊಸ ಘಟಕ ಸ್ಥಾಪಿಸುವ ಮೊದಲ ಪೀಳಿಗೆ ಉದ್ದಿಮೆದಾರಿಗೆ ಯೋಜನಾ ವೆಚ್ಚದಲ್ಲಿ Debt Equity ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿAದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿ ರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು. ವಿಸ್ತರಣೆ/ಆಧುನೀಕರಣ/ಚಟುವಟಿಕೆ ಬದಲಾವಣೆ ಹೊಂದಿದ ಉದ್ಯಮಗಳು ಅರ್ಹವಿರುತ್ತದೆ.

ಯಂತ್ರೋಪಕರಣಗಳ ಮೇಲೆ ರೂ.10.00 ಕೋಟಿ ಹೂಡಿಕೆ ಮಾಡಿರುವ ಘಟಕಗಳು ಗರಿಷ್ಟ ರೂ.75.00 ಲಕ್ಷಗಳ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಪಡೆಯಬಹುದಾಗಿದೆ. ಮಂಜೂರಾತಿ ಸಮಿತಿ ಸಭೆಯಲ್ಲಿ ವಿವರವಾದ ಪರಿಶೀಲನೆಯ ನಂತರ ಪರಿಶೀಲನಾ ಸಮಿತಿ ಶಿಫಾರಸು ಮಾಡಿದ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯವನ್ನು ಮಂಜೂರು ಮಾಡಲಾಗುವುದು.

ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಬಿಡುಗಡೆಮಾಡಿದ ದಿನಾಂಕದಿಂದ 04 ವರ್ಷ Moratorium ಅವಧಿಯಾಗಿರುತ್ತದೆ. ನಂತರ 5 ವರ್ಷಗಳಲ್ಲಿ 20 ತ್ರೈಮಾಸಿಕ ಸಮಕಂತುಗಳಲ್ಲಿ ಈ ಸಾಲವನ್ನು ಮರುಪಾವತಿ ಮಾಡತಕ್ಕದ್ದು.

ಆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತರವರಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳಿಗೆ ರಿಯಾಯಿತಿ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಹಂಚಿಕೆಯಾಗುವ ಗರಿಷ್ಟ 2 ಎಕರೆ ಕೈಗಾರಿಕಾ ನಿವೇಶನ/ಪ್ಲಾಟ್ ಗಳಿಗೆ ಶೇ.75 ರಷ್ಟು ಸಹಾಯಧನ ನೀಡಲಾಗುತ್ತಿದೆ.
ಹಂಚಿಕೆ ಪತ್ರದಲ್ಲಿನ ಮೊತ್ತದ ಶೇ.10 ರಷ್ಟು ಮೊತ್ತವನ್ನು ಪಾವತಿಸಿ ಫಲಾನುಭವಿಯು ಸ್ವಾಧೀನ ಪತ್ರ ಪಡೆಯತಕ್ಕದ್ದು, ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮಕಂತುಗಳಲ್ಲಿ ನಿಗಮ ಹಾಗೂ ಮಂಡಳಿಗೆ ಫಲಾನುಭವಿಯು ಪಾವತಿಸತಕ್ಕದ್ದು.

ಇ. ಗುಡಿ ಮತ್ತು ಸೂಕ್ಷ್ಮ ಕೈಗಾರಿಕಾ ಘಟಕಗಳು/ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಶೇ.60 ಸಹಾಯಧನ ಕಾರ್ಯಕ್ರಮ:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಗುಡಿ ಮತ್ತು ಅತೀ ಸೂಕ್ಷ್ಮ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಹಣಕಾಸು ಸಂಸ್ಥೆಗಳಿಗೆ ಸಾಲ ಮಂಜೂರಾತಿ ಪಡೆದ ನಂತರ ಇಲಾಖೆಯಿಂದ ಈ ಯೋಜನೆಯಡಿ ಅರ್ಹ ಸಹಾಯಧನ ಮಂಜೂರು ಮಾಡಿ, ಸಾಲದ ಮೊದಲನೇ ಕಂತು ಬಿಡುಗಡೆಯಾದ ಮೇಲೆ ಸದರಿ ಸಹಾಯಧನ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

- ಪ್ರವರ್ತಕರ ಬಂಡವಾಳ ಯೋಜನಾ ವೆಚ್ಚದ ಶೇ.10
- ಯೋಜನಾ ವೆಚ್ಚದ ಶೇ.90 ರಷ್ಟನ್ನು ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್‌ಗಳಿಂದ (ಪತ್ತಿನ ಸಹಕಾರ ಸಂಘಗಳನ್ನು ಹೊರತು ಪಡಿಸಿ) ಮಂಜೂರಾದ ಸಾಲದ ಮೇಲೆ, ಇಲಾಖೆ ವತಿಯಿಂದ ರೂ.10.00ಲಕ್ಷ ಮೀರದಂತೆ ಇರುವ ಯೋಜನೆಗಳಿಗೆ ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಟ ರೂ.5.00 ಲಕ್ಷಗಳವರೆಗೂ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ.

ಈ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳ ಮರುಪಾವತಿ

ದಿನಾಂಕ:01/04/2017 ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳು ಸಾಲ ಪಡೆಯುವ ಸಂದರ್ಭದಲ್ಲಿ ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಸರ್ಕಾರದ ವತಿಯಿಂದ ಮರುಪಾವತಿಸಲಾಗುತ್ತಿದೆ.

ಉ. ವಿದ್ಯುಚ್ಛಕ್ತಿ ಸಹಾಯಧನ:

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ಯಮಗಳು ದಿನಾಂಕ:01/04/2017 ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಪ್ರತಿ ಯುನಿಟ್‌ಗೆ ರೂ.2ರಂತೆ ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗುತ್ತಿದೆ.

3. ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆ (ಪಿಎಂಇಜಿಪಿ),

ನಿರುದ್ಯೋಗಿ ಯುವಕ ಯುವತಿಯವರಿಗೆ ಸಣ್ಣ ಕೈಗಾರಿಕೆ ಸ್ಥಾಪಿಸಲು ಕೇಂದ್ರ ಸರ್ಕಾರದ ವತಿಯಿಂದ ಪಿಎಂಇಜಿಪಿ ಯೋಜನೆಯು ಜಾರಿಯಲ್ಲಿರುತ್ತದೆ.

- 2008-09ನೇ ಸಾಲಿನಿಂದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಷ್ಟಿ ಕಾರ್ಯಕ್ರಮವನ್ನು (PMEGP) ಜಾರಿಗೊಳಿಸಲಾಗುತ್ತಿದೆ. ಸ್ಥಳೀಯ ಸಂಪನ್ಮೂಲಗಳ ಆಧಾರದ ಮೇಲೆ ಉತ್ಪಾದನೆ ಮತ್ತು ಸೇವಾ ವಲಯಗಳ ಅಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಉದ್ಯೋಗವನ್ನು ಒದಗಿಸುವುದು ಯೋಜನೆಯ ಉದ್ದೇಶವಾಗಿದೆ.
- ಈ ಯೋಜನೆಯಡಿ ವಿವಿಧ ಬ್ಯಾಂಕ್‌ಗಳ ಮೂಲಕ ಉತ್ಪಾದನಾ ವಲಯಕ್ಕೆ ರೂ. 50.00 ಲಕ್ಷ ಮತ್ತು ಸೇವಾ ವಲಯಕ್ಕೆ ರೂ. 20.00 ಲಕ್ಷದವರೆಗೆ ಸಾಲವನ್ನು ವಿಸ್ತರಿಸಲಾಗಿದೆ.

# ಅನುಬಂಧ - 2

# ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

## ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ವಿಭಾಗ

### ಅ. ಕೈಗಾರಿಕಾ ನೀತಿ 2025-30

ಕರ್ನಾಟಕ ಸರ್ಕಾರವು 08.02.2025 ರಿಂದ ಹೊಸ ಕೈಗಾರಿಕಾ ನೀತಿ 2025-30 ನ್ನು ಜಾರಿಗೆ ತಂದಿದ್ದು ಇದರಡಿಯಲ್ಲಿ ಹೊಸ ಕೈಗಾರಿಕಾ ಘಟಕ ಸ್ಥಾಪಿಸುವ, ಹಾಲಿ ಇರುವ ಕೈಗಾರಿಕೆಯ ವಿಸ್ತರಣೆಗಾಗಿ/ ಆಧುನೀಕರಣಕ್ಕಾಗಿ/ ವೈವಿಧ್ಯೀಕರಣಕ್ಕಾಗಿ ಬಂಡವಾಳ ಹೂಡುವ ಎಂ.ಎಸ್.ಎಂ.ಇ ಗಳಿಗೆ ಈ ಕೆಳಗಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳು ದೊರೆಯುತ್ತವೆ.

| ಸಾಮಾನ್ಯ ಪ್ರವರ್ಗ | | | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ. ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕರು) | | | |
|---|---|---|---|---|---|---|
| 1. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ | | | | | | |
| | ವಲಯ-1 | ವಲಯ-2 | ವಲಯ-3 | ವಲಯ-1 | ವಲಯ-2 | ವಲಯ-3 |
| ಸೂಕ್ಷ್ಮ ಕೈಗಾರಿಕೆಗಳು | 30% ವಿ.ಎಫ್.ಎ (ಗರಿಷ್ಠ ರೂ.30ಲಕ್ಷ) | 25% ವಿ.ಎಫ್.ಎ (ಗರಿಷ್ಠ ರೂ.25 ಲಕ್ಷ) | 10% ವಿ.ಎಫ್.ಎ (ಗರಿಷ್ಠ ರೂ10 ಲಕ್ಷ) (ಕೇವಲ ಬೆಂಗಳೂರು ಗ್ರಾಮಾಂತರ) | 35% ವಿ.ಎಫ್.ಎ (ಗರಿಷ್ಠ ರೂ.35ಲಕ್ಷ) | 30% ವಿ.ಎಫ್.ಎ (ಗರಿಷ್ಠ ರೂ.30ಲಕ್ಷ) | 15% ವಿ.ಎಫ್.ಎ (ಗರಿಷ್ಠ ರೂ.15 ಲಕ್ಷ) (ಕೇವಲ ಬೆಂಗಳೂರು ಗಾಮಾಂತರ) |
| ಸಣ್ಣ ಕೈಗಾರಿಕೆಗಳು | 25% ವಿ.ಎಫ್.ಎ (ಗರಿಷ್ಠ ರೂ.200 ಲಕ್ಷ) | 20% ವಿ.ಎಫ್.ಎ (ಗರಿಷ್ಠ ರೂ.150 ಲಕ್ಷ) | 10% ವಿ.ಎಫ್.ಎ (ಗರಿಷ್ಠ ರೂ.50ಲಕ್ಷ) (ಕೇವಲ ಬೆಂಗಳೂರು ಗ್ರಾಮಾಂತರ) | 30% ವಿ.ಎಫ್.ಎ (ಗರಿಷ್ಠ ರೂ.225ಲಕ್ಷ) | 25% ವಿ.ಎಫ್.ಎ (ಗರಿಷ್ಠ ರೂ.175ಲಕ್ಷ) | 15% ವಿ.ಎಫ್.ಎ (ಗರಿಷ್ಠ ರೂ.75 ಲಕ್ಷ) |

**ಟಿಪ್ಪಣಿ: ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನವನ್ನು ಎರಡು ಕಂತಿನಲ್ಲಿ ಬಿಡುಗಡೆ ಮಾಡಲಾಗುವುದು.**

ವಿ.ಎಫ್.ಎ: ವ್ಯಾಲ್ಯು ಆಫ್ ಫಿಕ್ಸೆಡ್ ಅಸೆಟ್ಸ್

ಮಧ್ಯಮ ಕೈಗಾರಿಕೆಗಳು : ಹೂಡಿಕೆ ಉತ್ತೇಜನಾ ಸಹಾಯಧನದ ಕುರಿತು ಎರಡು ಆಯ್ಕೆಗಳನ್ನು ಕಲ್ಪಿಸಲಾಗಿರುತ್ತದೆ.

| ಮಧ್ಯಮ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ | | ಮಧ್ಯಮ ಕೈಗಾರಿಕೆಗಳಿಗೆ ಉತ್ಪಾದನಾ ಆಧಾರಿತ ಸಹಾಯಧನ |
|---|---|---|
| ಹೂಡಿಕೆ ಉತ್ತೇಜನಾ ಸಹಾಯಧನ ಘಟಕವು ಉತ್ಪಾದನೆ ಪ್ರಾರಂಭಿಸಿದ ನಂತರ 4 ಸಮ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು | | ಘಟಕದ ಉತ್ಪಾದನೆಯ ಆಧಾರದಲ್ಲಿ ಗರಿಷ್ಠ 7 ವರ್ಷ |
| ವಲಯ-1 | 25% ವಿ.ಎಫ್.ಎ (ಗರಿಷ್ಠ ರೂ.10 ಕೋಟಿ) | 2.5% ನಿವ್ವಳ ಉತ್ಪಾದನೆ (ಗರಿಷ್ಠ ಶೇ.60 ವಿ.ಎಫ್.ಎ) |
| ವಲಯ-2 | 20% ವಿ.ಎಫ್.ಎ (ಗರಿಷ್ಠ ರೂ.8 ಕೋಟಿ) | 2.0% ನಿವ್ವಳ ಉತ್ಪಾದನೆ (ಗರಿಷ್ಠ ಶೇ.60 ವಿ.ಎಫ್.ಎ) |
| ವಲಯ-3 | 10% ವಿ.ಎಫ್.ಎ (ಗರಿಷ್ಠ ರೂ.4 ಕೋಟಿ) (ಕೇವಲ ಬೆಂಗಳೂರು ಗ್ರಾಮಾಂತರ) | 1.0% ನಿವ್ವಳ ಉತ್ಪಾದನೆ (ಗರಿಷ್ಠ ಶೇ.30 ವಿ.ಎಫ್.ಎ) (ಕೇವಲ ಬೆಂಗಳೂರು ಗ್ರಾಮಾಂತರ) |

ಟಿಪ್ಪಣಿ: ಡಾ ನಂಜುಂಡಪ್ಪ ವರದಿಯ ಅನ್ವಯ ಹೆಚ್ಚುವರಿ ಉತ್ತೇಜನಾ ಸಹಾಯಧನವನ್ನು ಈ ಕೆಳಕಂಡಂತೆ ಕಲ್ಪಿಸಲಾಗಿದೆ

| | | |
|---|---|---|
| ಸೂಕ್ಷ್ಮ ಕೈಗಾರಿಕೆಗಳು | ಅತ್ಯಂತ ಹಿಂದುಳಿದ ತಾಲ್ಲೂಕು | 5% ವಿ.ಎಫ್.ಎ (ಗರಿಷ್ಠ ರೂ.5ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಠ ರೂ.3ಲಕ್ಷ) |
| ಸಣ್ಣ ಕೈಗಾರಿಕೆಗಳು | ಅತ್ಯಂತ ಹಿಂದುಳಿದ ತಾಲ್ಲೂಕು | 5% ವಿ.ಎಫ್.ಎ (ಗರಿಷ್ಠ ರೂ.10ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಠ ರೂ.5ಲಕ್ಷ) |
| ಮಧ್ಯಮ ಕೈಗಾರಿಕೆಗಳು | ಅತ್ಯಂತ ಹಿಂದುಳಿದ ತಾಲ್ಲೂಕು | 5% ವಿ.ಎಫ್.ಎ (ಗರಿಷ್ಠ ರೂ.50ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಠ ರೂ.25 ಲಕ್ಷ) |
| ಮಧ್ಯಮ ಕೈಗಾರಿಕೆಗಳು (ಉತ್ಪಾದನಾ ಆಧಾರಿತ) | ಅತ್ಯಂತ ಹಿಂದುಳಿದ ತಾಲ್ಲುಕು | ಗರಿಷ್ಠ 5% ವಿ.ಎಫ್.ಎ |
| | ಹಿಂದುಳಿದ ತಾಲ್ಲೂಕು | ಗರಿಷ್ಠ 3% ವಿ.ಎಫ್.ಎ |

ಬಂಡವಾಳ ಹೂಡಿಕೆ ಸಹಾಯಧನವನ್ನು ಉದ್ಯಮಶೀಲರು ಹೂಡುವ ನಿವೇಶನ, ಕಟ್ಟಡ, ಯಂತ್ರೋಪಕರಣ ಇವುಗಳನ್ನು ಸ್ಥಿರಾಸ್ತಿ (ವಿ.ಎಂ.ಎ) ಎಂದು ಪರಿಗಣಿಸಿ ಇದರ ಶೇಕಡವಾರು ನೀಡಲಾಗುವುದು.

| | |
|---|---|
| **2. ಎಂಎಸ್‌ಎಂಇಗಳಿಗೆ ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:** | |
| ಅರ್ಹತೆ<br>1.ರಾಜ್ಯ ಹಣಕಾಸು ನಿಗಮ,<br>2.ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು,<br>3.ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು,<br>4.ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ,<br>5.ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್),<br>6.ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ,<br>7.ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ<br>ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು. | ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್ ಮತ್ತು ಬಹುಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು<br>1.ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ,<br>2.ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ,<br>3.ಕಿಯಾನಿಕ್ಸ್,<br>4.ಕೈಗಾರಿಕಾ ಸಹಕಾರ ಸಂಘಗಳು,<br>5.ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳು,<br>6.ಆಹಾರ ಪಾರ್ಕ್‌ಗಳು,<br>7.ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ(ಎಸ್/ಪಿ.ವಿ)ಗಳಿಂದ ಹಂಚಿಕೆ 8.ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್ಸ್), ಭೋಗ್ಯ ಮತ್ತು 9.ಕ್ರಯ ಪತ್ರ, ಉಪ-ಭೋಗ್ಯ(ಸಬ್ ಲೀಸ್) ಹಾಗೂ ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ<br>ವಿನಾಯಿತಿ ನೀಡಲಾಗುತ್ತದೆ. |
| **2.ಅ ಎಂಎಸ್‌ಎಂಇ ಗಳಿಗೆ ಸ್ಟಾಂಪ್ ಶುಲ್ಕ ವಿನಾಯಿತಿ** | |
| ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ದುಡಿಮೆ ಬಂಡವಾಳಕ್ಕೆ ಸ್ಟಾಂಪ್ ಶುಲ್ಕವನ್ನು ಉತ್ಪಾದನೆ ಪ್ರಾರಂಭಿಸಿದೆ 3 ವರ್ಷಗಳಲ್ಲಿ ಮಾತ್ರ ಕಲ್ಪಿಸಲಾಗಿದೆ. | |
| **2.ಆ ಎಂಎಸ್‌ಎಂಇ ಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ:** | |
| ವಲಯ 1, ವಲಯ 2 : ರೂ.1000/-ಕ್ಕೆ ರೂ.1/-<br>ವಲಯ 3 : ಇಲ್ಲ | ಎಲ್ಲಾ ವಲಯಗಳಿಗೆ :ರೂ.1000/-ಕ್ಕೆ ರೂ.1/- |
| **3. ಎಂಎಸ್‌ಎಂಇ ಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ** | |
| ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| **4. ಎಂಎಸ್‌ಎಂಇ ಗಳಿಗೆ ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ** | |
| ವಲಯ 1 : 100% 7 ವರ್ಷದವರೆಗೆ<br>ವಲಯ 2 : 100% 6 ವರ್ಷದವರೆಗೆ<br>ವಲಯ 3 : ಇಲ್ಲ | ವಲಯ 1 : 100% 8 ವರ್ಷದವರೆಗೆ<br>ವಲಯ 2 : 100% 7 ವರ್ಷದವರೆಗೆ<br>ವಲಯ 3 : 100% 4 ವರ್ಷದವರೆಗೆ |
| **5. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ** | |
| ವಲಯ 1 ಮತ್ತು 2 ಕ್ಕೆ ಮಾತ್ರ: ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/-ರಂತೆ 3 ವರ್ಷಗಳ ಅವಧಿ ವರೆಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ | |
| **6. ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ** | |
| **ಎಲ್ಲಾ ವಲಯಗಳಿಗೆ**<br>ಐಎಸ್‌ಓ ಸರಣಿ ಪ್ರಮಾಣೀಕರಣ<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)<br>ಎಫ್.ಎಸ್.ಎಸ್.ಎ.ಐ- ಅಗ್ಮಾರ್ಕ್<br>ಎಕೋಮಾರ್ಕ<br>ಝಿರೊ ಡಿಫೇಕ್ಟ ಝಿರೋ ಎಫೆಕ್ಟ (ಝಿಡ್)<br>ಐ.ಎಸ್.ಐ<br>ಫ್ರೂಟ್ ಪ್ರಾಡಕ್ಟ ಆರ್ಡರ್ (ಎಫ್.ಪಿ.ಓ)<br>ಬ್ಯೂರೋ ಆಫ್ ಎನರ್ಜಿ ಎಫೀಸಿಯೆನ್ಸಿ (ಬಿ.ಇ.ಇ)<br>ಯಾವುದೇ ಅಂತರಾಷ್ಟ್ರೀಯ ಕ್ವಾಲಿಟಿ ಸರ್ಟಿಫಿಕೇಷನ್ ಭಾರತ ದೇಶ ಅಂಗೀಕರಿಸಿದ ಸರ್ಟಿಫಿಕೇಟ್ ಗಳು | ಒಟ್ಟು ಅರ್ಜಿಯ ಮೊತ್ತದ ಶೇ 50 ( ಗರಿಷ್ಟ ಮೊತ್ತ ರೂ.5.00ಲಕ್ಷ ಪ್ರತಿ ಅರ್ಜಿಗೆ) |